Date : 18-12-2015

# ಮುಂದಿನ ತಿಂಗಳಿಂದ ನೀರುಳ್ಳಿ ಆವಕ ಹೆಚ್ಚಳ ಸಂಭವ

ರಾಬಿ ಬೆಳೆಯ ನೀರುಳ್ಳಿ ಮುಂದಿನ ತಿಂಗಳಿಂದ ಮಾರುಕಟ್ಟೆಗೆ ಆವಕವಾಗುವ ಸಂಭವವಿರುವುದರಿಂದ ನೀರುಳ್ಳಿ ದರ ಮಾರ್ಚ್, ಎಪ್ರಿಲ್ ತಿಂಗಳ ತನಕ ಇಳಿಕೆಯಲ್ಲಿರುವ ಸಂಭವವಿದೆಯೆನ್ನಲಾಗಿದೆ. ಈಗ ದಿನವಹಿ ಆವಕವಾಗುತ್ತಿರುವ 30000 ಟನ್ ನೀರುಳ್ಳಿ ಮುಂದೆ ದುಪ್ಪಟ್ಟಾಗುವ ಸಂಭವವಿದೆಯೆನ್ನಲಾಗಿದೆ. ಇದರಿಂದ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಗಳಲ್ಲಿ ನೀರುಳ್ಳಿ ದರ ಇಳಿಕೆಯಾಗುವ ಸಂಭವವಿದೆಯೆನ್ನಲಾಗಿದೆ.